

# ಮೃಗತೃಷ್ಣೆ

THE MIRAGE

■ ಕೇಶವರೆಡ್ಡಿ ಹಂದ್ರಾಳ

ಕಲೆ: ಮನೋಹರ ಆಚಾರ್ಯ

## ಮೈಮನಗಳ ಸುಳಿಯಲ್ಲಿ

‘ಈಗ ಅದೆಲ್ಲಾ ಬೇಕಿತ್ತಾ ಪಪ್ಪಾ...’ ಅರುಂಧತಿ ಖಾಲಿಯಾದ ನನ್ನ ಚಹಾದ ಲೋಟವನ್ನು ಎತ್ತಿಕೊಂಡು ಹೇಳಿದ್ದಳು.

‘ಭಗವಾನ್ ಕುಟ್ಟಿ’. ಸ್ವಲ್ಪ ಜೋರಾಗಿಯೇ ಕೂಗಿದ್ದರು ಮಾಧವನ್ ಪಿಳ್ಳೈ. ಎರಡು ನಿಮಿಷಗಳಲ್ಲಿ ಮಾಧವನ್ ಪಿಳ್ಳೈರವರಷ್ಟೇ ವಯಸ್ಸಾದ ವ್ಯಕ್ತಿಯೊಬ್ಬರು ಬಂದು ನಿಂತಿದ್ದರು. ಮಾಧವನ್ ಪಿಳ್ಳೈರವರಿಗಿಂತಲೂ ಗಟ್ಟಿಮುಟ್ಟಾಗಿದ್ದರು .

‘ಮಿಸ್ಟರ್ ಕೆಕೆಆರ್, ಇವನು ಭಗವಾನ್ ಕುಟ್ಟಿ ಅಂತ. ಮಿಡ್ಲಿಸ್ಕೂಲುವರೆಗೂ ಒಂದೇ ಬೆಂಚಿನಲ್ಲಿ ಕುಳಿತವರು. ಆಮೇಲೆ ಎಷ್ಟೋ ವರ್ಷಗಳ ನಂತರ ಒಬ್ಬರನ್ನೊಬ್ಬರು ನೋಡಿಯೂ ಇರಲಿಲ್ಲ, ಮಾತನಾಡಿಯೂ ಇರಲಿಲ್ಲ. ಸದ್ಯಕ್ಕೆ ಆರು ವರ್ಷಗಳಿಂದ ನಮ್ಮ ಮನೆಯಲ್ಲೇ ಇದ್ದಾನೆ. ಮತ್ತು ನನ್ನ ಎಂಥಾ ಪರ್ಸನಲ್ ವಿಷಯವಾದರೂ ಇವನಿಗೆ ಹೇಗೋ ತಿಳಿದುಬಿಡ್ತದೆ. ಓದಿದ್ದು ಮಿಡ್ಲಿಸ್ಕೂಲಾದರೂ ರಬ್ಬರ್ ಗಿಡ ನೆಡುವುದರಿಂದ ಹಿಡಿದು ಭಗವದ್ಗೀತೆ, ಕುರಾನ್, ಬೈಬಲ್‌ವರೆಗೂ ಅದ್ಭುತವಾಗಿ ತಿಳಿದುಕೊಂಡಿದ್ದಾನೆ. ತಕಳಿ ಶಿವಶಂಕರ್ ಪಿಳ್ಳೈರವರ ಸಾಹಿತ್ಯದಿಂದ ಹಿಡಿದು ಶೇಕ್ಸ್‌ಪಿಯರ್ ಸಾಹಿತ್ಯದವರೆಗೂ ಓದಿಕೊಂಡಿದ್ದಾನೆ. ಒಮ್ಮೊಮ್ಮೆ ಪೊಲಿಟಿಕಲ್, ಫೈನಾನ್ಸಿಯಲ್ ವಿಷಯಗಳಲ್ಲೂ ಇವನ ಅಡ್ವೈಸ್ ತಗೋತೀನಿ’ ಎಂದು ಮಾಧವನ್ ಪಿಳ್ಳೈ ಹೇಳುವಾಗ ಭಗವಾನ್ ಕುಟ್ಟಿ ಕೃತಜ್ಞತೆಯಿಂದ ನನ್ನ ಕಡೆ ನೋಡಿ ಕೈ ಮುಗಿದಿದ್ದ. ನಾನೂ ಕೈ ಮುಗಿಯುತ್ತಾ, ‘ಓಹ್, ಎಂಥ ಅದ್ಭುತ ಗೆಳೆತನ ನಿಮ್ಮದು’ ಎಂದು ಇಬ್ಬರನ್ನೂ ಮೆಚ್ಚಿ ಹೇಳಿದ್ದೆ.

‘ನೀವು ಇಲ್ಲಿರುವವರೆಗೂ ನಿಮ್ಮೆಲ್ಲ ಅವಶ್ಯಕತೆಗಳನ್ನೂ ಇವನೇ ನೋಡಿಕೊಳ್ಳೋದು. ಸದ್ಯಕ್ಕೆ ಒಂದರ್ಧ ಗಂಟೆ ಇವನ ಹತ್ತಿರ ಬಾಡಿ ಮಸಾಜ್ ಮಾಡಿಸಿಕೊಂಡು, ಸ್ಟೀಮ್ ಬಾತ್ ಮಾಡಿಕೊಂಡು ಬನ್ನಿ ಅರ್ಧ ಗಂಟೆ ಡ್ಯಾನ್ಸ್ ಮುಗಿದ ಮೇಲೆ ಊಟ ಮಾಡೋಣ. ಈ ಕುಟ್ಟಿ ಫಿಶ್, ಚಿಕನ್, ಮಟನ್ ಐಟಂಗಳನ್ನು ತುಂಬಾ ರುಚಿಕರವಾಗಿ ಕುಕಿಂಗ್ ಮಾಡ್ತಾನೆ ಮತ್ತು ಸಖತ್ತಾಗಿ ತಿಂತಾನೆ ಕೂಡ’ ಎಂದ ಮಾಧವನ್ ಪಿಳ್ಳೈ ಮಾತುಗಳಿಗೆ ‘ಈಗಾಗಲೇ ನನ್ನದು ಸ್ನಾನ ಮುಗಿದಿದೆ’ ಎಂದೆ.

‘ಪರವಾಗಿಲ್ಲ, ಇನ್ನೂ ಬೇಕಾದಷ್ಟು ಟೈಮಿದೆ. ಮಸಾಜ್ ಕೂಡ ನಮ್ಮ ಆತಿಥ್ಯದ ಅವಶ್ಯಕ ಮತ್ತು ಅನಿವಾರ್ಯವಾದ ಒಂದು ಐಟಂ, ನೀವು ನಿರಾಕರಿಸುವಂತಿಲ್ಲ’ ಎಂದವರ ಮಾತಿಗೆ ನನಗೆ ಬದಲು ಹೇಳಲು ಸಾಧ್ಯವಾಗಲಿಲ್ಲ. ಜೊತೆಗೆ ಮಸಾಜ್ ಬಗ್ಗೆ ಕುತೂಹಲ ಮತ್ತು ಬಯಕೆಯೂ ಉಂಟಾಗಿತ್ತು. ಭಗವಾನ್ ಕುಟ್ಟಿಯ ಜೊತೆಯಲ್ಲಿ ಗೆಸ್ಟ್ ಹೌಸ್ ಪ್ರವೇಶಿಸಿದ್ದೆ.

ಮೂರ್ನಾಲ್ಕು ಘಮಘಮಿಸುವ ಎಣ್ಣೆಗಳನ್ನು ಬೆರೆಸಿ ಭಗವಾನ್ ಕುಟ್ಟಿ ಮಸಾಜ್ ಮಾಡತೊಡಗಿದ. ಮಸಾಜ್ ಅತ್ಯಂತ ಹಿತವಾಗಿತ್ತು. ಆತನಿಗೆ ಎಪ್ಪತ್ತೆರಡು ವರ್ಷ ವಯಸ್ಸಾಗಿದ್ದರೂ ಕೈ ಹಿಡಿತದ ಬಲ ಅಗಾಧವಾಗಿತ್ತು. ಮಸಾಜ್ ಟೇಬಲ್ ಮೇಲೆ ಅಂಗಾತ ಮಲಗಿಸಿ ಕಾಲುಗಳನ್ನು ತೊಡೆಯಿಂದ ಅಂಗಾಲಿನವರೆಗೂ ನೀವುತ್ತಾ, ‘ನಮ್ಮ ಮಾಧವನ್ ಪಿಳ್ಳೈಗೂ ನಿಮಗೂ ಪರಿಚಯ ಹೇಗಾಯ್ತು?’ ಎಂದು ಕೇಳಿದ್ದ. ಆತ ಸ್ವಲ್ಪ ಕುಡಿದಿರುವುದು ಬಾಯಿಂದ ಹೊರಬರುತ್ತಿದ್ದ ಘಮ್ಮನೆಯ ವಾಸನೆಯಿಂದ ತಿಳಿದಿತ್ತು.

‘ಮಾಧವನ್ ಪಿಳ್ಳೈರವರನ್ನು ಇವತ್ತೇ ನಾನು ನೋಡುತ್ತಿರುವುದು. ನನ್ನ ಫ್ರೆಂಡ್ ಕಾಕಿಗಡ್ಡ ರಾಘವರೆಡ್ಡಿ ಬರಬೇಕಿತ್ತು ಜೊತೆಯಲ್ಲಿ. ಅವರ ಚಿಕ್ಕಮ್ಮ ಇವೊತ್ತು ಬೆಳಿಗ್ಗೆ ಸತ್ತುಹೋಗಿದ್ದರಿಂದ ನಾನೊಬ್ಬನೇ ಬಂದೆ’. ಏನು ಹೇಳಬೇಕೆಂದು ತೋಚದೆ ಹೇಳಿದ್ದೆ.

‘ಓಹ್ , ರಾಘವರೆಡ್ಡಿ ಸಾರ್, ತುಂಬಾ ಜಾಲಿ ಮನುಷ್ಯ. ಈ ಐದು ವರ್ಷಗಳಿಂದ ನಾಲ್ಕು ಬಾರಿ ಬಂದಿರಬಹುದು. ಅವರಿಗೂ ಎರಡು ಸಾರಿ ಮಸಾಜ್ ಮಾಡಿದ್ದೇನೆ. ಈಗ ನಾನು ಸ್ವಲ್ಪ ವಿಸ್ಕಿ ಕುಡಿದಿದ್ದೇನೆ. ನಿಮಗೆ ಗೊತ್ತಾ , ಇಡೀ ಸೌತ್ ಇಂಡಿಯಾದಲ್ಲಿ ನಮ್ಮ ಕೇರಳವೇ ಲಿಕ್ಕರ್ ಕನ್ಸಂಪ್ಷನ್‌ನಲ್ಲಿ ಮೊದಲಿರೋದು. ಲಿಕ್ಕರ್ ಇದೆಯಲ್ಲಾ, ಅದನ್ನು ಕರೆಕ್ಟಾಗಿ ತೆಗೆದುಕೊಂಡರೆ ಮನಸ್ಸು ಮತ್ತು ದೇಹ ಎರಡನ್ನೂ ಉಲ್ಲಾಸವಾಗಿಟ್ಟಿರುತ್ತದೆ. ಎಂಥ ಕಠಿಣವಾದ ಕೆಲಸವನ್ನು ಮಾಡಲೂ ಧೈರ್ಯ ಮತ್ತು ಉತ್ತೇಜನ ನೀಡುತ್ತದೆ. ದೇವರುಗಳು